

# ಬಿಂದಿಯ ಬಿಂಬದಲಿ

ಸೌಂದರ್ಯಪ್ರಜ್ಞೆ ಹೆಚ್ಚಿದಂತೆ ಮುಖದ ಆಕಾರಕ್ಕೆ ತಕ್ಕಂತೆ, ಉಡುಪಿಗೆ ತಕ್ಕಂತೆ ಸರಿ ಹೊಂದುವ ರೀತಿಯ ಬೊಟ್ಟಿನ ಆಯ್ಕೆ ಆದ್ಯತೆ ಪಡೆದುಕೊಂಡಿದೆ.

■ **ಪವಿತ್ರಾ ಭಟ್**

ಹೆಣ್ಣು ಮಕ್ಕಳು ಅದೆಷ್ಟೇ ಮೇಕಪ್ ಮಾಡಿಕೊಂಡು ತಯಾರಾದರೂ ಬೊಟ್ಟಿಲ್ಲದ ಬೋಳು ಹಣೆ ಚಂದ್ರನಿಲ್ಲದ ನೀಲಾಕಾಶದಂತೆ ಎನ್ನುತ್ತಾರೆ ಹಿರಿಯರು. ಭಾರತದಲ್ಲಿ ಬಿಂದಿ ಅಥವಾ ಹಣೆಬೊಟ್ಟು ಕೇವಲ ಅಲಂಕಾರಿಕ ಚುಕ್ಕಿಯಲ್ಲ, ಇದು ಸಂಸ್ಕೃತಿಯನ್ನೂ ಸಾರುತ್ತದೆ. ಹೆಣ್ಣು ಮಾತ್ರವಲ್ಲದೆ ಗಂಡು ಮಕ್ಕಳೂ ಹಣೆಗೆ ಕೆಂಪು ಬೊಟ್ಟನ್ನಿಟ್ಟುಕೊಳ್ಳುತ್ತಾರೆ.

ಬಿಂದಿ ಹೆಣ್ಣಿನ ಅಲಂಕಾರದ ಭಾಗ. ಮುಖ ನೋಡಿದಾಕ್ಷಣ ಕಾಣುವ ಹಣೆಯ ಮೇಲಿನ ಬೊಟ್ಟು ಎಂಥವರನ್ನೂ ಆಕರ್ಷಿಸಬಲ್ಲದು.

ತರಹೇವಾರಿ ಬಿಂದಿಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಸೌಂದರ್ಯಪ್ರಜ್ಞೆ ಹೆಚ್ಚಿದಂತೆ ಮುಖದ ಆಕಾರಕ್ಕೆ ತಕ್ಕಂತೆ, ಉಡುಪಿಗೆ ತಕ್ಕಂತೆ ಸರಿ ಹೊಂದುವ ರೀತಿಯ ಬೊಟ್ಟಿನ ಆಯ್ಕೆ ಆದ್ಯತೆ ಪಡೆದುಕೊಂಡಿದೆ. ಬಣ್ಣ, ಆಕಾರ, ವಿನ್ಯಾಸ ಎಲ್ಲದರಲ್ಲೂ ನಾವೀನ್ಯತೆ ಪಡೆದುಕೊಂಡ ಬಿಂದಿ ಹೆಣ್ಣುಮಕ್ಕಳ ಮೇಕಪ್ ಪೆಟ್ಟಿಗೆ ಸೇರಿಬಿಟ್ಟಿದೆ.

ಸಾಂಪ್ರದಾಯಿಕ ಉಡುಗೆಗಾಗಲೀ ಸ್ಟೈಲಿಷ್ ಉಡುಗೆಗಾಗಲೀ ಸೊಬಗಿನ ಸ್ಪರ್ಶ ನೀಡುವ ಶಕ್ತಿ ಈ ಹಣೆಬೊಟ್ಟಿಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ರೀತಿಯ ಬಿಂದಿಯನ್ನಿಡುವ ಸಂಪ್ರದಾಯವೂ ಇದೆ.

## ಮುಖಕ್ಕೆ ತಕ್ಕ ಹಾಗೆ ಬಿಂದಿ ಇರಲಿ

ಅದೇನೇ ಮೇಕಪ್, ಸೌಂದರ್ಯೀಕರಣ ಮಾಡಿಕೊಂಡರೂ ಬಿಂದಿ ಮುಖದ ಆಕಾರಕ್ಕೆ ಒಪ್ಪುವ ಹಾಗಿರಬೇಕು. ಆಗ ಮಾತ್ರ ಸೌಂದರ್ಯ ದುಪ್ಪಟ್ಟಾಗುವುದು. ಅದು ಬಿಂದಿಯ ಆಯ್ಕೆಗೂ ಹೊರತಲ್ಲ.

**ದುಂಡನೆಯ ಮುಖ:** ವಜ್ರದಾಕಾರದ ಅಥವಾ ಉದ್ದವಾದ ಬಿಂದಿ ದುಂಡನೆಯ ಮುಖದವರಿಗೆ ಹೊಂದಾಣಿಕೆಯಾಗುತ್ತದೆ.

**ಚೌಕಾಕಾರದ ಮುಖ:** ಈ ರೀತಿಯ ಮುಖ ಇರುವವರಿಗೆ ಹಣೆ, ಕೆನ್ನೆಯ ಭಾಗಗಳು ಅಗಲವಾಗಿರುತ್ತವೆ. ಹೀಗಾಗಿ ವೃತ್ತಾಕಾರದ ಅಥವಾ ವಿ ಆಕಾರದ ಬಿಂದಿಗಳನ್ನು ಇಟ್ಟುಕೊಳ್ಳಿ.

**ತ್ರಿಕೋನ ಮುಖ:** ತ್ರಿಕೋನ ಶೈಲಿಯ ಮುಖ ನಿಮ್ಮದಾಗಿದ್ದರೆ ಸಾಮಾನ್ಯವಾಗಿ ಎಲ್ಲಾ ವಿಧದ ಬಿಂದಿಗಳು ಹೊಂದಾಣಿಕೆಯಾಗುತ್ತವೆ. ದಪ್ಪವಾದ ಗಾಢ ಕೆಂಪು ಬಿಂದಿಗಳ ಆಯ್ಕೆ ಒಳ್ಳೆಯದು.

## ಬಿಂದಿಯಲ್ಲೂ ವೈವಿಧ್ಯ

ಭಾರತದಲ್ಲಿ ಸಾಂಪ್ರದಾಯಿಕವಾಗಿ ಬಿಂದಿಗಳನ್ನು ಇಟ್ಟುಕೊಳ್ಳುತ್ತಾರೆ. ಇತ್ತೀಚೆಗೆ ಅದು ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲದೆ, ಉಡುಪು, ಫ್ಯಾಷನ್‌ಗೆ ಅಗತ್ಯವಾಗಿ ಮಾರ್ಪಟ್ಟಿದೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಅರ್ಧಚಂದ್ರಾಕೃತಿಯ ಬಿಂದಿ ಜನಪ್ರಿಯ. ಬಂಗಾಳಿ ಸಂಪ್ರದಾಯದಲ್ಲಿ ಚಂದನ್ ಬಿಂದಿ ಪ್ರಸಿದ್ಧ. ಅಂದರೆ ಕೆಂಪು ಬೊಟ್ಟಿನ ಸುತ್ತ ಬಿಳಿ ಬಣ್ಣದಲ್ಲಿ ಚುಕ್ಕಿಯನ್ನು ಇಡಲಾಗುತ್ತದೆ.

## ಡಿಸೈನರ್ ಬಿಂದಿ

ಈ ಬಗೆಯ ಬಿಂದಿಗಳು ಕರಕುಶಲತೆಯಿಂದ ಕೂಡಿರುತ್ತವೆ. ಹರಳು, ಮಣಿ, ಕ್ರಿಸ್ಟಲ್‌ಗಳಿಂದ ಬಿಂದಿಗಳನ್ನು ಅಲಂಕರಿಸಲಾಗಿರುತ್ತದೆ. ಪಾರ್ಟಿ, ಸಮಾರಂಭಗಳಲ್ಲಿ ಡಿಸೈನರ್ ಬಿಂದಿಗಳು ಆಕರ್ಷಕವಾಗಿ ಕಾಣುವಂತೆ ಮಾಡುತ್ತದೆ.



**ಪ್ಯಾಸ್ಟಲ್ ಬಿಂದಿ:** ಬಣ್ಣಬಣ್ಣದ ಹರಳುಗಳಿಂದ ಕೂಡಿದ ಬಿಂದಿಗಳನ್ನು ಪ್ಯಾಸ್ಟಲ್ ಬಿಂದಿಗಳು ಎನ್ನುತ್ತಾರೆ. ಲೆಹೆಂಗಾ, ಸೀರೆಗಳಿಗೆ ಚೆನ್ನಾಗಿ ಹೊಂದುತ್ತದೆ. ಸೌಂದರ್ಯವನ್ನು ಹೆಚ್ಚಿಸುತ್ತದೆ. ಡಿಸೈನರ್ ಬಿಂದಿಗಳಂತೆ ಕಾಣುವ ಇವು ಮುಖದ ಸೊಬಗನ್ನು ಹೆಚ್ಚಿಸುತ್ತವೆ.

**ಮುತ್ತಿನ ಬಿಂದಿ:** ಬಿಳಿ, ಕೆಂಪು, ನೀಲಿ ಹೀಗೆ ವಿವಿಧ ಬಣ್ಣಗಳಲ್ಲಿ ಪುಟ್ಟ ಪುಟ್ಟದಾಗಿ ಇರುವ ಮುತ್ತಿನ ಬಿಂದಿಗಳು ಮುಖದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ. ಚೂಡಿದಾರ್, ಕುರ್ತಾಗಳಿಗೆ ಪುಟ್ಟ ಬಿಂದಿಗಳು ಒಪ್ಪುತ್ತವೆ.

**ಲಿಕ್ವಿಡ್ ಬಿಂದಿ:** ಮಾರುಕಟ್ಟೆಯಲ್ಲಿ ಬಣ್ಣ ಬಣ್ಣದ ಲಿಕ್ವಿಡ್ ಬಿಂದಿಗಳು ಸಿಗುತ್ತವೆ. ಇದನ್ನು ಬಳಸಿ ನಮಗೆ ಬೇಕಾದ ವಿನ್ಯಾಸವನ್ನು ನಾವು ಹಣೆಯ ಮೇಲೆ ಮೂಡಿಸಿಕೊಳ್ಳಬಹುದು. ವಜ್ರದಾಕಾರ, ವೃತ್ತಾಕಾರ, ಹೂವಿನಾಕಾರ ಹೀಗೆ ಹಲವು.

## ಬಿಂದಿ ಅಂಟಿಸುವ ಮುನ್ನ

ಲಿಕ್ವಿಡ್, ಅಂಟು ಇರುವ ಬಿಂದಿ ಅಥವಾ ಕುಂಕುಮವೇ ಆಗಲಿ, ಹಣೆಗೆ ಹಚ್ಚಿಕೊಳ್ಳುವಾಗ ಎಚ್ಚರಿಕೆ ಇರಲಿ. ಏಕೆಂದರೆ ಕೆಲವೊಮ್ಮೆ ಅದರಲ್ಲಿ ಬಳಕೆ ಮಾಡಿರುವ ರಾಸಾಯನಿಕ ಪದಾರ್ಥಗಳು ಚರ್ಮಕ್ಕೆ ಅಲರ್ಜಿ ಉಂಟು ಮಾಡುವ ಸಾಧ್ಯತೆ ಇರುತ್ತದೆ. ಹೀಗಾಗಿ ಕಳಪೆ ಗುಣಮಟ್ಟದ ಬಿಂದಿ ಖರೀದಿಸದಿರಿ. ಸ್ಟೋನ್, ಮಣಿಗಳಿರುವ ಬಿಂದಿಗಳು ಭಾರ ಎನ್ನಿಸುವಂತೆ ಮಾಡಬಹುದು. ಹಣೆಯ ಮಧ್ಯ ಕೂದಲು ಇದ್ದರೆ ಬಿಂದಿಗಳನ್ನು ತೆಗೆಯುವಾಗ ಜಾಗರೂಕರಾಗಿರಿ. ■